1995 ಜುಲೈವರೆಗೆ	106	139.00
ಅಂಕೋಲ		
1993-94	341	399.00
1994-95	322	295.62
1995 ಜುಲೈ ಅಂತ್ಯದವರೆಗೆ	166	88.40

ಅ) ಹಾಲಿ ಇರುವ ನೀರು ಸರಬರಾಜು ವ್ಯವಸ್ಥೆಯು 20 ವರ್ಷಗಳಷ್ಟು ಹಳೆಯದಾಗಿದ್ದು ಯಂತ್ರೋಪಕರಣಗಳ ಸವೆತದಿಂದಾಗಿ ಕಾರ್ಯ ಕ್ಷಮತೆಯಲ್ಲಿ ಕ್ಷೀಣತೆ ಉಂಟಾಗಿರುತ್ತದೆ. ಹಾಗೂ ಪೈಪ್‌ಲೈನ್ ಜಾಯಿಂಟ್‌ಗಳು ದುರ್ಬಲಗೊಂಡಿರುತ್ತದೆ. ಹಾಗೂ ವಿದ್ಯುಚ್ಛಕ್ತಿಯ ಆಡಚಣೆ ಮತ್ತು ನೀರಿನ ಬೇಡಿಕೆಯಲ್ಲಿ ಗಮನಾರ್ಹ ಏರಿಕೆ ಉಂಟಾಗಿರುತ್ತದೆ. ಈ ಮೇಲ್ಕಂಡ ಕಾರಣಗಳಿಂದಾಗಿ ಈ ಎರಡು ಪಟ್ಟಣಗಳಿಗೆ ಸಾಕಷ್ಟು ನೀರು ಪೂರೈಸಲು ಸಾಧ್ಯವಾಗಿರುವುದಿಲ್ಲ.

ಇ) 20 ವರ್ಷ ಹಳೆಯದಾದ ಪೈಪ್‌ಲೈನ್‌ನ ಜಾಯಿಂಟ್‌ಗಳು ದುರ್ಬಲಗೊಂಡಿದ್ದು ಆಗಾಗ ಅವುಗಳಲ್ಲಿ ಸೋರಿಕೆ ಉಂಟಾಗುತ್ತಿರುತ್ತದೆ. ಈ ಜಾಯಿಂಟ್‌ಗಳನ್ನು ಬಲಪಡಿಸಲು ಅಂದಾಜು ಪಟ್ಟಿಯನ್ನು ತಯಾರಿಸಲಾಗುತ್ತಿದೆ.

ಈ) ಇಲ್ಲ.

ಉ) ನಗರದ ಹೊಸ ಬಡಾವಣೆಗಳಿಗೆ ನೀರು ಪೂರೈಕೆ ಮಾಡಲು, ನಗರದ ನೀರು ಸರಬರಾಜು ವ್ಯವಸ್ಥೆಯ ಅಭಿವೃದ್ಧಿಗಾಗಿ, ಒಂದು ಯೋಜನೆಯನ್ನು ಸಿದ್ಧ ಪಡಿಸಲಾಗುತ್ತಿದೆ.

ಹುಬ್ಬಳ್ಳಿ - ಧಾರವಾಡ ನಗರಕ್ಕೆ ನೀರು ಪೂರೈಕೆ

1533ಎ - ಶ್ರೀ ಅಶೋಕ್ ಕಾಟ್ವೆ (ಹುಬ್ಬಳ್ಳಿ ನಗರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹುಬ್ಬಳ್ಳಿ - ಧಾರವಾಡ ಅವಳಿ ನಗರಗಳಲ್ಲಿ ನೀರು ಪೂರೈಕೆಯ ಕಾರ್ಯ ನೆನೆಗುದಿಗೆ ಬಿದ್ದು, ಜನಸಾಮಾನ್ಯರು ಬವಣೆ ಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಈ ಬಗ್ಗೆ ಸರ್ಕಾರವು ತೆಗೆದುಕೊಂಡ ಕ್ರಮಗಳೇನು?

ಆ) ಅಂಥ ಕಾರ್ಯಕ್ರಮ ಜಾರಿಗೆ ತಂದಿದ್ದಾರೆ. ಅದರ ವಸ್ತು ಸ್ಥಿತಿ ಯಾವ ಹಂತದಲ್ಲಿದೆ?

ಇ) ಇದಕ್ಕಾಗಿ ಸರ್ಕಾರ ಬಿಡುಗಡೆ ಮಾಡಿದ ಹಣವೆಷ್ಟು?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಹೌದು, ಇದನ್ನು ಪರಿಹರಿಸಲು ರೂ. 700.00 ಲಕ್ಷಗಳ ಅಂದಾಜಿನಲ್ಲಿ ಜಲಸಂಗ್ರಹಾಗಾರಗಳ ನಿರ್ಮಾಣ ಮತ್ತು ವಿತರಣಾ ಜಾಲ ನವೀಕರಣ ಯೋಜನೆಯ ಕಾರ್ಯವನ್ನು ಕೈಗೊಳ್ಳಲಾಗಿದೆ.

ಆ) ಮೇಲ್ಕಂಡ ಯೋಜನೆಯ ಕಾಮಗಾರಿಗಳ ಪೈಕಿ ಶೇ. 90ರಷ್ಟು ಕೆಲಸ ಮುಗಿಸಲಾಗಿದೆ. ಉಳಿದ ಕೆಲಸಗಳು ಮಾರ್ಚಿ 96ಕ್ಕೆ ಮುಗಿಯುವ ನಿರೀಕ್ಷೆ ಇದೆ.

ಇ) ಪುರಸಭೆಯವರಿಂದ 30 ಲಕ್ಷ ಒಳಗೊಂಡಂತೆ ಸರ್ಕಾರದಿಂದ ಖರ್ಚು628.63 ಲಕ್ಷ

ಬೇರೆ ಮೂಲಗಳಿಂದ 497.81

ರೂ. 1126.44 ಲಕ್ಷ

ಹುಬ್ಬಳ್ಳಿಯಲ್ಲಿರುವ ಕೊಳಚೆ ಪ್ರದೇಶಗಳಿಗೆ ನಾಗರೀಕ ಸೌಲಭ್ಯ

1536 - ಶ್ರೀ ಅಶೋಕ್ಕಾಟವೆ (ಹುಬ್ಬಳ್ಳಿ ನಗರ ಕ್ಷೇತ್ರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೊಳಚೆ ಅಭಿವೃದ್ಧಿ ನಿಗಮದವರು ಹುಬ್ಬಳ್ಳಿಯಲ್ಲಿರುವ ನೇಕಾರ ನಗರ ಹಾಗೂ ಇತರೆ ಘೋಷಿತ ಕೊಳಚೆ ಪ್ರದೇಶಗಳಲ್ಲಿ ರಸ್ತೆ, ಗಟಾರ, ನೀರು ಪೂರೈಕೆ ಹಾಗೂ ವಿದ್ಯುತ್ ಸೌಲಭ್ಯಗಳನ್ನೊದಗಿಸಲು ಬಿಡುಗಡೆ ಮಾಡಿದ ಹಣವೆಷ್ಟು ?

ಆ) ಹಣ ಬಿಡುಗಡೆ ಮಾಡಿದ್ದಲ್ಲಿ ಕೈಗೊಂಡ ಕ್ರಮದ ವಿವರಣೆ ನೀಡುವುದು ?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) 1994-95ನೇ ಸಾಲಿನಲ್ಲಿ ಬಿಡುಗಡೆ ಮಾಡಲಾಗಿರುವ ಒಟ್ಟು ಹಣ 7.225 ಲಕ್ಷ ರೂ.ಗಳು.

ಪ್ರಸಕ್ತ ಸಾಲಿನಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು 14.00 ಲಕ್ಷ ರೂ.ಗಳನ್ನು ಮತ್ತು ವಸತಿ ನಿರ್ಮಾಣ ಯೋಜನೆಗೆಂದು 40.00 ಲಕ್ಷ ರೂ.ಗಳನ್ನು ಕಾಯ್ದಿರಿಸಲಾಗಿದೆ.

ಆ) 7.225 ಲಕ್ಷ ರೂ.ಗಳ ಬಿಡುಗಡೆಯ ಅನುದಾನದಲ್ಲಿ ನೇಕಾರ ನಗರ ಕೊಳಚೆ ಪ್ರದೇಶಕ್ಕೆ 1.25 ಲಕ್ಷ ರೂ.ಗಳನ್ನು ಖರ್ಚು ಮಾಡುವ ಮೂಲಕ 2 ಕಿರು ನೀರು ಸರಬರಾಜು ಯೋಜನೆಗಳನ್ನು ಕೈಗೊಳ್ಳಲಾಗಿದೆ. ಹಾಗೂ ಇನ್ನಿತರೆ 9 ಕೊಳಚೆ ಪ್ರದೇಶಗಳಲ್ಲಿ 5.975 ಲಕ್ಷ ರೂ.ಗಳ ಅಂದಾಜಿನಲ್ಲಿ ಕೊಳವೆ ಬಾವಿ, ಒಳಚರಂಡಿ ಕೆಲಸ, ನೆಲಹಾಸು ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. (ವಿವರಗಳನ್ನು ಅನುಬಂಧ ಅನಲ್ಲಿ ಒದಗಿಸಿದೆ).

ಅನುಬಂಧ - ಅ

(ರೂ. ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಕೊಳಚೆ ಪ್ರದೇಶದ ಹೆಸರು	ಅಂದಾಜು	ವೆಚ್ಚ	ಕಾಮಗಾರಿಯ ವಿವರ
ಹುಬ್ಬಳ್ಳಿ ಶಹರ ಕ್ಷೇತ್ರದಲ್ಲಿ ಬರುವ 1994-95ನೇ ಸಾಲಿನಲ್ಲಿ ಮಂಜೂರಾದ ಅನುದಾನದ ವಿವರ				
1.	ಕರಿಗಣ್ಣವರ ಹಕ್ಕಲ	0.90	0.468	ಕೊಳವೆ ಬಾವಿ ಕೆಲಸ ಮುಗಿದಿದೆ
2.	ಯಲ್ಲಾಪುರ ಓಣಿ (ಮಾರುತಿ ಗುಡಿ ಹಿಂಭಾಗ)	0.90	0.879	ಕೊಳವೆ ಬಾವಿ ಒಳಚರಂಡಿ ಕೆಲಸ ಮುಗಿದಿದೆ
3.	ತಾತುಸ್ಕರ ಫ್ಯಾಕ್ಟರಿ ಹಿಂಭಾಗ	0.40	0.283	ಕೊಳವೆ ಬಾವಿ ಕೆಲಸ ಮುಗಿದಿದೆ
4.	ಬ್ರಹ್ಮಾಪುರ, ದೊಡ್ಡಕೇರಿ	0.40	0.398	-ಅದೇ -
5.	ಹೇಸಿಗ ಮಡ್ಡಿ	0.90	0.398	- ಅದೇ -
6.	ಮುಲಾಲಿ ಜೋಪಡಿ	0.475	0.472	- ಅದೇ -
7.	10:ಎ ಯಲ್ಲಾಪುರ ಓಣಿ	0.40	0.390	ಒಳಚರಂಡಿ ಕೆಲಸ ಮುಗಿದಿದೆ.
ಹುಬ್ಬಳ್ಳಿ ಗ್ರಾಮೀಣ ಕ್ಷೇತ್ರದಲ್ಲಿ ಬರುವ 1994-95ನೇ ಸಾಲಿನಲ್ಲಿ ಮಂಜೂರಾದ ಅನುದಾನದ ವಿವರ				